ಕ್ರಿಕೆಟ್ ಎಲ್ಲರಿಗೂ ಗೊತ್ತು. ಐಪಿಎಲ್ ಈಗ ಬಹುತೇಕ ಮನೆಮಾತು. ಹತ್ತನೇ ಋತುವಿಗೆ ಕಾಲಿಟ್ಟಿರುವ ಈ ಸಲದ ಐಪಿಎಲ್ ನಲ್ಲಿ ಒಮ್ಮಿಂದೊಮ್ಮೆಲೆ ಮೇಲೆದ್ದು ಬಂದಿರುವ ಕೋಟಿವೀರರು ಮಾತ್ರ ಬಹುತೇಕ ಯಾರಿಗೂ ಗೊತ್ತಿಲ್ಲ. ದಶಕಗಳ ಕಾಲ ಗುಂಡು ಮದ್ದುಗಳ ಮೊರೆತ ಅನುಭವಿಸಿದ ಆಫ್ಘಾನಿಸ್ತಾನದ ಯುವಕನೊಬ್ಬ ತನ್ನ ಸ್ಪಿನ್ ಕೈಚಳಕದ ಹಿನ್ನೆಲೆಯಲ್ಲಿ ನಾಲ್ಕು ಕೋಟಿ ರೂಪಾಯಿಗೆ ಹರಾಜಿನಲ್ಲಿ ಆಯ್ಕೆಯಾಗುತ್ತಾನೆ. 14ರ ಹರೆಯದವರೆಗೂ ಬಹುತೇಕ ಅಕಾಡೆಮಿಗಳ ಬಾಗಿಲು ತಟ್ಟಿದರೂ ಅವಕಾಶ ಸಿಗದ ತರುಣನೊಬ್ಬ ಹಂತ ಹಂತವಾಗಿ ಮೇಲೇರಿ ಬಂದು 1.9 ಕೋಟಿ ರೂಪಾಯಿ ಪಡೆಯುತ್ತಾನೆ. ಒಂದೇ ಒಂದು ಅಂತರರಾಷ್ಟ್ರೀಯ ಪಂದ್ಯವಾಡಿ ಬೆನ್ನುನೋವಿನಿಂದ ಮಲಗಿದ್ದ ತರುಣನೊಬ್ಬ 12 ಕೋಟಿ ರೂಪಾಯಿಗೆ ಖರೀದಿಯಾಗುತ್ತಾನೆ. ಆಟೊ ಚಾಲಕನ ಮಗನೊಬ್ಬ 2.6 ಕೋಟಿ ಸಂಭಾವನೆ ಪಡೆದು ಖುಷಿಯಲ್ಲಿ ಮೊಹಲ್ಲಕ್ಕೆಲ್ಲ ಬಿರಿಯಾನಿ ಹಂಚುತ್ತಾನೆ. ಈ ಸಲದ ಐಪಿಎಲ್ ತರುಣರ ಪಾಲಿಗೆ ಸಂಜೀವಿನಿಯೇ ಸರಿ. ಸುಮ್ಮನೆ ಈ ಕೆಳಗಿನ ಕೆಲವು ಆಟಗಾರರ ಉದಾಹರಣೆಗಳನ್ನು ಓದಿ:

## ಯುವೋತ್ಸಾಹ: ರಶೀದ್ ಖಾನ್ ಅರ್ಮಾನ್

ಕಳೆದ ಒಂದು ವಾರದಿಂದ ಕ್ರಿಕೆಟ್ ಪ್ರಿಯರ ನಾಲಿಗೆ ತುದಿಯಲ್ಲಿ ನಲಿದಾಡುತ್ತಿರುವ ಹೆಸರು ಇದು. ಆಫ್ಘಾನಿಸ್ತಾನ 18ರ ಯುವಕ ರಶೀದ್ ಏಪ್ರಿಲ್ 5ರಂದು ಹೈದರಾಬಾದ್‌ನ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ತೋರಿಸಿದ ಕೈಚಳಕ ಅದಕ್ಕೆ ಕಾರಣ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಹತ್ತನೇ ಆವೃತ್ತಿಯ ಉದ್ಘಾಟನೆ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಪರ ಕಣಕ್ಕಿಳಿದ ರಶೀದ್ ತಮ್ಮ ಗೂಗ್ಲಿ ಎಸೆತಗಳ ಮೂಲಕ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಆರಂಭಿಕ ಬ್ಯಾಟ್ಸ್‌ಮನ್ ಮನದೀಪ್ ಸಿಂಗ್ ಮತ್ತು ಟ್ರಾವಿಸ್ ಹೆಡ್ ಅವರ ವಿಕೆಟ್ ಉರುಳಿಸಿದ್ದರು. ಅದರೊಂದಿಗೆ ತಮ್ಮ ತಂಡದ ನಾಯಕ ಡೇವಿಡ್ ವಾರ್ನರ್ ಅವರ ಮನಗೆದ್ದರು.

ಭಯೋತ್ಪಾದನೆಯ ಕರಿನೆರಳಿನಿಂದ ಹೊರಬರುತ್ತಿರುವ ಆಫ್ಘಾನಿಸ್ತಾನದ ಪುನರುತ್ಥಾನದಲ್ಲಿ ಕ್ರಿಕೆಟ್ ಕೂಡ ತನ್ನ ಕಾಣಿಕೆ ನೀಡುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಆಫ್ಘನ್ ಅಸ್ಮಿತೆಯನ್ನು ಪಸರಿಸುವ ರಾಯಭಾರಿಯಾಗಿ ಅಲ್ಲಿ ಕ್ರಿಕೆಟ್ ಬೆಳೆಯುತ್ತಿದೆ. ಇಂತಹ ಸಂದರ್ಭದಲ್ಲಿ ಐಪಿಎಲ್‌ನಲ್ಲಿ ಇದೇ ಮೊದಲ ಬಾರಿಗೆ ಆ ದೇಶದ ರಶೀದ್ ಮತ್ತು ಮೊಹಮ್ಮದ್ ನಬಿ ಅವರು ಸ್ಥಾನ ಪಡೆದಿದ್ದಾರೆ. ಇಬ್ಬರನ್ನೂ ಸನ್‌ರೈಸರ್ಸ್ ತಂಡವು ಈಚೆಗೆ ನಡೆದ ಬಿಡ್‌ನಲ್ಲಿ ಖರೀದಿಸಿತ್ತು. ರಶೀದ್ ₹ 4 ಕೋಟಿ ಪಡೆದರೆ, ನಬಿ ₹ 30 ಲಕ್ಷ ಪಡೆದಿದ್ದಾರೆ.

ಇಲ್ಲಿ ದುಡ್ಡಿನ ಜೊತೆಗೆ ಕ್ರಿಕೆಟ್ ಕ್ಷೇತ್ರದ ಅತ್ಯಂತ ಶ್ರೀಮಂತ ಮತ್ತು ಪ್ರತಿಷ್ಠಿತ ಲೀಗ್‌ನಲ್ಲಿ



ಕರುಣ್ ನಾಯರ್

**14** ಸ್ವದೇಶದ ಆಟಗಾರರು ಒಂದು ತಂಡದಲ್ಲಿ ಇರಬಹುದು.




ಮನೀಶ್ ಪಾಂಡೆ